ಪ್ರಕರಣಗಳಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ, ಹಾಗೂ ಉಳಿದ 6 ಪ್ರಕರಣಗಳ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ. ಮಲ್ಲೇಶ್ವರಂ ಸಹಕಾರ ಸಂಘದಲ್ಲಿ 5 ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಣೆಯಲ್ಲಿ ಲೋಪ ಕಂಡುಬಂದು, ಮೂರು ಮಂದಿ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದೂ ಹೇಳಿದ್ದಾರೆ. ನೀವು ಏನು ಕ್ರಮ ತೆಗೆದು ಕೊಂಡಿದ್ದೀರಿ ಮತ್ತು ತನಿಖೆ ಮಾಡುವಂಥ ಅಧಿಕಾರಿಗಳು ಆಹಾರ ಇಲಾಖೆಯವರೇ ಅಥವಾ ತೂಕ ಮತ್ತು ಅಳತೆಯ ಇಲಾಖೆಯವರೇ, ಇದನ್ನು ಮಾನ್ಯಮಂತ್ರಿಗಳು ಹೇಳಬೇಕೆಂದು ನಾನು ಕೇಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:– ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಾನು ಉತ್ತರವನ್ನು ಒದಗಿಸಿಕೊಟ್ಟಿದ್ದೇನೆ. ಮೂರು ಪ್ರಕರಣಗಳಲ್ಲಿ ಮುಂದಿನ ಕ್ರಮಕ್ಕಾಗಿ ಜಂಟಿ ನಿರ್ದೇಶಕರಿಗೆ ಕಳುಹಿಸಿಕೊಡಲಾಗಿದೆ ಎಂದು ನಮಗೆ ವರದಿ ಬಂದಿದೆ. ಅಷ್ಟೇ ಅಲ್ಲ ಫ್ಲೈಸ್ ಹಾಕುವಂತಹುದು ಇದ್ದರೆ, ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಕಣ್ಣ:– ಈ ಎಲ್ಲಾ ಬ್ರಾಂಚಸ್‌ನಲ್ಲೂ ಕೂಡ ಸರಿಯಾಗಿ ಆಹಾರ ವಿತರಣೆ ಆಗುತ್ತಿಲ್ಲ. ಕಡಿಮೆ ಅಳತೆ ಕೊಡುತ್ತಿದ್ದಾರೆ. ಆ ದಿಸೆಯಲ್ಲಿ ನಮ್ಮ ಇನ್‌ಫಾರ್ಮಲ್ ರೇಷನಿಂಗ್ ಸಿಸ್ಟಮ್ ಏನಿದೆ ಇದನ್ನು ತೆಗೆಯುವುದು ಒಳ್ಳೆಯದೆಂದು ಕಾಣುತ್ತದೆ. ನಾವು ಏನು ಕಾನೂನುಗಳನ್ನು ಹೆಚ್ಚು ಹೆಚ್ಚು ಮಾಡುತ್ತೇವೆ, ಅದರಲ್ಲಿ ಲೋಪದೋಷಗಳು ಹೆಚ್ಚಾಗುತ್ತಿವೆ. ರೈಸ್‌ಅನ್ನು ಒಂಡು ಡಿಸ್ಟ್ರಿಕ್ಟ್‌ನಿಂದ ಇನ್ನೊಂದು ಡಿಸ್ಟ್ರಿಕ್ಟ್‌ಗೆ ತೆಗೆಯಬಾರದೆಂದು ಏನು ನಿರ್ಬಂಧ ಇತ್ತು. ಈ ಆಹಾರ ವಿತರಣೆ ನಿರ್ಬಂಧವನ್ನು ತೆಗೆದು ಹಾಕಿದ ಮೇಲೆ ಆಹಾರ ಬೆಲೆಗಳು ಎಷ್ಟೋ ಕಡಿಮೆಯಾಗಿದೆ. ಈ ದೃಷ್ಟಿಯಿಂದ ಈ ಇನ್‌ಫಾರ್ಮಲ್ ರೇಷನಿಂಗ್ ಏರಿಯಾ ಎಂದು ಇರತಕ್ಕದ್ದು ಒಳ್ಳೆಯದಲ್ಲ. ಇದು ಇರುವುದರಿಂದ ಅಧಿಕಾರಿಗಳಿಗೆ ಹೆಚ್ಚಿನ ಲೋಪದೋಷಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಮತ್ತು ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದರಲ್ಲಿ ಲೋಪದೋಷಗಳನ್ನು ಮಾಡುತ್ತಿದ್ದಾರೆ. ಇದನ್ನು ತೆಗೆದುಬಿಟ್ಟರೆ ಉತ್ತಮವಾಗುತ್ತದೆ ಎಂದು ಮಾನ್ಯ ಆಹಾರ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:– ಮಾನ್ಯ ಸಭಾಧ್ಯಕ್ಷಿಣಿಯವರೇ, ಪ್ರತಿಯೊಂದು ನ್ಯಾಯಬೆಲೆ ಅಂಗಡಿಗಳನ್ನು ಕೂಡ ತನಿಖೆ ಮಾಡಲು ವಿಜಿಲೆನ್ಸ್ ಕಮಿಟಿಯನ್ನು ನೇಮಕ ಮಾಡಿದ್ದೇವೆ. ಒಂದು ವೇಳೆ ತೂಕದಲ್ಲಿ, ಅಳತೆಯಲ್ಲಿ ಹೆಚ್ಚು ಕಡಿಮೆ ಇದ್ದರೆ ಖಂಡಿತ ಸಂಬಂಧಪಟ್ಟ ತಹಸೀಲ್ದಾರ್‌ರವರಿಗೆ, ನಮ್ಮ ಇಲಾಖೆಯ ಅಧಿಕಾರಿಗಳಿಗೆ ಕಂಪ್ಲೈಂಟ್ ಕೊಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ:– ಬೆಂಗಳೂರು ನಗರದ ತ್ಯಾಗರಾಜನಗರ ಬಡಾವಣೆಯ ಸೊಸೈಟಿಯಲ್ಲಿ ಮುಗ್ಗಲು ಅಕ್ಕಿಯನ್ನು ಕೊಡುತ್ತಿದ್ದಾರೆ. ಇದನ್ನು ಸಂಬಂಧಪಟ್ಟ ಸೊಸೈಟಿಯಿಂದ ತಂದಿದ್ದೇನೆ. ಇದರ ಬಗ್ಗೆ ತನಿಖೆ ಮಾಡಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ. (ಅಕ್ಕಿಯನ್ನು ಅಧ್ಯಕ್ಷರಿಗೆ ಕಳುಹಿಸಿದರು)

Scarcity of Kerosene in the State.

39. SRI. M.V. VENKATAPPA (Mulabagilu):– Will the Minister for Food and Civil Supplies be pleased to state?

a) Whether it has come to the notice of the Government that there is a scarcity of kerosene oil in the State and it is not available to the public at reasonable price.

b) If so, what are the actions taken by the Government against those who sold kerosene oil in black market?

SMT. MANORAMA MADHWARAJ (Minister for Food and Civil Supplies):–

a) The allotment of Kerosene to the State is not adequate. However, it is being sold at reasonable rates.

b) Action is taken against the dealers who indulge in black marketing of kerosene oil. 74 kerosene dealer licences have been cancelled, and the licences of 344 dealers are placed under suspension.

ಶ್ರೀ ಎಂ.ವಿ. ವೆಂಕಟಪ್ಪ:– ನಮ್ಮ ಕರ್ನಾಟಕ ರಾಜ್ಯಕ್ಕೆ ಸೆಂಟರ್‌ನಿಂದ ಎಷ್ಟು ಸೀಮೆಎಣ್ಣೆ ಬರುತ್ತಿದೆ, ಎಷ್ಟು ಸಾಲದೆ ಬಂದಿದೆ, ಎಷ್ಟು ಸೀಮೆಎಣ್ಣೆಯನ್ನು ಕೋಲಾರ ಜಿಲ್ಲೆಗೆ ಕೊಟ್ಟಿದ್ದೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್:– ಕರ್ನಾಟಕ ರಾಜ್ಯದ ಒಟ್ಟು ಬೇಡಿಕೆ ತಿಂಗಳೊಂದಕ್ಕೆ 67 ಸಾವಿರ ಕಿಲೋಲೀಟರ್, ನಮಗೆ 47,513 ಕಿಲೋ ಲೀಟರ್ ಬರುತ್ತಿದೆ. ಅದರಲ್ಲಿ ಕೋಲಾರ ಜಿಲ್ಲೆಗೆ 2150 ಕಿಲೋ ಲೀಟರ್ ಕೊಡುತ್ತಿದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ:– ಹಿಂದಿನ ಪ್ರಶ್ನೆಗೆ ವಿಜಿಲೆನ್ಸ್ ಕಮಿಟಿ ಮಾಡಿದ್ದೇವೆ ಎಂದು ಹೇಳಿದಿರಿ. ಆ ವಿಜಿಲೆನ್ಸ್ ಕಮಿಟಿಗಳಿಗೆ ಇರುವ ಪವರ್ಸ್ ಏನು ?

ಶ್ರೀಮತಿ ಮನೋರಮಾ ಮಧ್ವರಾಜ್:– ಪವರ್ಸ್ ಏನೂ ಇಲ್ಲ. ಅಳತೆ ತೂಕದಲ್ಲಿ ಹೆಚ್ಚು ಕಡಿಮೆ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು, ಪವರ್ಸ್ ಕೊಡುವುದಕ್ಕೆ ಆಗುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳು

54. ಶ್ರೀ ಜಿ.ಎಸ್. ಆಚಾರ್ (ಬೈಂದೂರು):– ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಮತ್ತು ಶಂಕರನಾರಾಯಣ ಊರುಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1) ಬೋಧಕ 2) ಬೋಧಕೇತರ ಸಿಬ್ಬಂದಿಗಳ ಸ್ಥಾನ ಎಷ್ಟು ಖಾಲಿ ಇದೆ ?

ಆ) ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಇ) ಸದರಿ ಕಾಲೇಜುಗಳಿಗೆ ಕಟ್ಟಡ ಕಟ್ಟಲು ಯಾವ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಸ್.ಎಂ. ಯಾಹ್ಯಾ (ಶಿಕ್ಷಣ ಮತ್ತು ವಕ್ಫ್ ಸಚಿವರು):–

ಅ)	ಖಾಲಿ ಇರುವ ಬೋಧಕ	ಸ್ಥಾನಗಳ ಸಂಖ್ಯೆ ಬೋಧಕೇತರ
ಬೈಂದೂರು:	2	6
ಶಂಕರನಾರಾಯಣ:	3	1